**<u>ಸಾಕ್ಷಿಗೆ ದಿನಾಂಕಃ 06.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀಮತಿ.NP ರವರಿಂದಃ</u>**

1) ನಾನು ಈ ಪ್ರಕರಣದಲ್ಲಿ **2** ನೇ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, **ಪೋಲಿಸರಿಗೆ ನೀಡಿರುವ ದೂರನ್ನು ನಿ.ಪಿ.2** ಎಂದು ಗುರುತಿಸಿದೆ.

   **<u>ಸೂಚನೆಃ</u>** ನಿ.ಪಿ.**2** ದಾಖಲೆಯು ತೆಲುಗು ಭಾಷೆಯಲ್ಲಿ ಇದೆ. ಸದರಿ ನಿ.ಪಿ.**2** ದಾಖಲೆಯ ಕನ್ನಡ ಭಾಷಾಂತರ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.**2(**ಎ**)** ಎಂದು ಗುರುತಿಸಿದೆ.

3) **ಕೃತ್ಯ ನಡೆದ ಸ್ಥಳದ ನಕ್ಷೆಗಳನ್ನು** ನಿ.ಪಿ.**3** ಮತ್ತು ನಿ.ಪಿ.**4** ಎಂದು ಗುರುತಿಸಿದೆ. **Accident report** ಅನ್ನು ನಿ.ಪಿ.**5** ಎಂದು ಗುರುತಿಸಿದೆ.

4) ಶವ ಪಂಚನಾಮ ವರದಿಯನ್ನು ನಿ.ಪಿ.**6** ಎಂದು ಗುರುತಿಸಿದೆ.

**<u>ಸೂಚನೆಃ</u>** ನಿ.ಪಿ.**6** ದಾಖಲೆಯು ತೆಲುಗು ಭಾಷೆಯಲ್ಲಿ ಇದೆ. ಸದರಿ ನಿ.ಪಿ.**6** ದಾಖಲೆಯ ಆಂಗ್ಲ ಭಾಷಾಂತರ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.**6(ಎ)** ಎಂದು ಗುರುತಿಸಿದೆ.

5) **Post Mortem** ವರದಿಯನ್ನು ನಿ.ಪಿ.**7** ಎಂದು, ಮತ್ತು ಅಂತಿಮ ವರದಿಯನ್ನು ನಿ.ಪಿ.**8** ಎಂದು ಗುರುತಿಸಿದೆ.

**<u>ಸೂಚನೆಃ</u>** ನಿ.ಪಿ.1 ರಿಂದ ನಿ.ಪಿ.8 ಎಂದು ಗುರುತು ಆಗಿರುವ ದಾಖಲೆಗಳು ಮುಡಿವೇಡು ಪೋಲಿಸ್ ಠಾಣೆಯವರು ನೀಡಿರುವಂತಹ ಯಥಾ ನಕಲುಗಳು ಆಗಿವೆ.

6) ಈಗ ಸಾಕ್ಷಿದಾರರು ತಮ್ಮ ಮತ್ತು **1** ನೇ ಅರ್ಜಿದಾರರ ಮೂಲ ಆಧಾರ್ ಕಾರ್ಡ್ ದಾಖಲೆಗಳನ್ನು ಮತ್ತು ಅಪಘಾತದಲ್ಲಿ ಮರಣ ಹೊಂದಿದ ರಾಮ್ ಸಿಂಗ್ ರವರ ಮೂಲ ಆಧಾರ್ ಕಾರ್ಡ್ ಮತ್ತು ಇದೇ ದಾಖಲೆಗಳ ನೆರಳಚ್ಚು **(photo copy)** ಪ್ರತಿಗಳನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಗಳನ್ನು ಮತ್ತು ನೆರಳಚ್ಚು ಪ್ರತಿಗಳನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ನೆರಳಚ್ಚು ಪ್ರತಿಗಳನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ನೆರಳಚ್ಚು ಪ್ರತಿಗಳನ್ನು ನಿ.ಪಿ.**9** ರಿಂದ ನಿ.ಪಿ.**11** ಎಂದು ಗುರುತಿಸಿದೆ ಮತ್ತು ಮೂಲ

ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

7) ಆದ ಕಾರಣದಿಂದ ಪ್ರಾರ್ಥನೆಯಂತೆ ನಮಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು: ಕೋರಿಕೆಯ ಮೇರೆಗೆ ಮುಂದೂಡಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.೩)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.